ಮೂಲವಸ್ತು. ಈ ಅನೇಕಾನೇಕ ಪ್ರಪಂಚಗಳು ಬ್ರಹ್ಮನಿಗಿಂತ ಅಭಿನ್ನ ವಾದುವು. ಸಮುದ್ರದ ಮೇಲಿನ ಗುಳ್ಳೆಗಳಂತೆ ಅವು ಬ್ರಹ್ಮನಿಂದ ಸೃಷ್ಟಿಯಾಗಿ, ಬ್ರಹ್ಮನಲ್ಲಿಯೇ ವಿಲೀನಹೊಂದುತ್ತವೆ.''

ಈ ಮಾತುಗಳನ್ನು ಕೇಳಿ ಕರ್ಕಟಿ ತುಂಬ ಸಂತೋಷಪಟ್ಟಳು. ಆಕೆ ರಾಜನ ಜ್ಞಾನದ ಮಟ್ಟವನ್ನು ಪರೀಕ್ಷಿಸಲು ಇಚ್ಛಿಸಿದಳು.

ಇದಕ್ಕೆ ರಾಜ ಹೀಗೆಂದ: ''ಓ ರಾಕ್ಷಸಿ, ಇರುವುದು ಬ್ರಹ್ಮತತ್ತ್ವವೊಂದೇ. ಈ ವೈವಿಧ್ಯಮಯ ಜಗತ್ತಿಗೆ ಅಸ್ತಿತ್ವವೆನ್ನುವುದೇ ಇಲ್ಲ, ನಮ್ಮ ಮನಸ್ಸಿನ ಸಂಕಲ್ಪದ ಹಾಗೆ ಈ ಜಗತ್ತು ನಮಗೆ ತೋರಿ ಬರುತ್ತದೆ. ನಮ್ಮ ಮನಸ್ಸಿನಲ್ಲಿ ಏಳುವ ಸಂಕಲ್ಪಗಳನ್ನು ನಾಶ ಮಾಡಿಕೊಳ್ಳಲು ಸಾಧ್ಯವಾದರೆ, ನಮ್ಮ ಪಾಲಿಗೆ ಜಗತ್ತೂ ನಾಶವಾಗುವುದು. ಅಜ್ಞಾನವೇ ಸಂಸಾರಚಕ್ರ ಉರುಳುತ್ತಿರುವುದಕ್ಕೆ ಕಾರಣ. ಓ ಕರ್ಕಟಿ, ನಿನ್ನ ಪ್ರಶ್ನೆಗಳಲ್ಲೆಲ್ಲ ನೀನು ಸೂಚಿಸಿರುವುದು ಬ್ರಹ್ಮತತ್ತ್ವವನ್ನು ಮಾತ್ರವೇ. ಆ ಬ್ರಹ್ಮತತ್ತ್ವವೇ ಈ ಜಗತ್ತಿನ ಹಾಗೆ ಕಾಣಿಸಿಕೊಳ್ಳುತ್ತಿರುವುದು. ಹಾಗಿದ್ದರೂ ಅದು ತನ್ನ ಅದ್ವಯ, ಅನಂತ, ಸರ್ವವ್ಯಾಪಿ, ಸ್ವಪ್ರಕಾಶ ರೂಪವನ್ನು ಬಿಟ್ಟುಕೊಡುವುದಿಲ್ಲ. ಬ್ರಹ್ಮವೆಂದರೆ ಏನೆಂದುಕೊಂಡಿರುವೆ? ಅದು 'ಸತ್' ಸ್ವರೂಪವಾದುದು. ಅಂದರೆ 'ಅಸ್ತಿತ್ವ' ಮಾತ್ರವೇ. ಇಡೀ ಜಗತ್ತು ಮೂಡಿಬಂದಿರುವುದು ಈ ಸದ್ವಸ್ತುವಿನಿಂದಲೇ. ಪ್ರಳಯಕಾಲದಲ್ಲಿ ಅದು ವಿಲೀನವಾಗುವುದೂ ಇದರಲ್ಲಿಯೇ. ಇಂಥ ಬ್ರಹ್ಮವಸ್ತುವನ್ನು ಶುದ್ಧ ಮನಸ್ಸಿನಿಂದ ಮಾತ್ರವೇ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯ. ನಮ್ಮ ಮನಸ್ಸಿನಲ್ಲಿ ನೆಲೆ ನಿಂತಿರುವ ಸಂಕಲ್ಪ-ವಿಕಲ್ಪಗಳನ್ನು (ಸಂಕಲ್ಪವೆಂದರೆ, 'ನಾನು ಹೀಗೆ ಮಾಡುತ್ತೇನೆ, ಹಾಗೆ ಮಾಡುತ್ತೇನೆ' ಎನ್ನುವ ಭಾವನೆ; ವಿಕಲ್ಪ ಅದಕ್ಕೆ ವಿರುದ್ಧವಾದುದು) ಕಳೆದುಕೊಂಡಾಗ ಮಾತ್ರ ಮನಸ್ಸು ಶುದ್ಧವಾಗುವುದು.''

ರಾಜನ ಈ ಮಾತುಗಳನ್ನು ಕೇಳಿ ಕರ್ಕಟಿಗೆ ಮಹದಾನಂದ ವಾಯಿತು. ಅವಳು ಹೇಳಿದಳು: ''ಓ ರಾಜ, ನೀನು ಮತ್ತು ನಿನ್ನ ಮಂತ್ರಿ - ಇಬ್ಬರೂ ನಿಜವಾದ ಋಷಿಗಳೇ ಸರಿ. ನೀವು ಜಗದ್ವಂದ್ಯರು. ಇಬ್ಬರೂ ಜ್ಞಾನಸೂರ್ಯನಂತೆ ಬೆಳಗುತ್ತಿದ್ದೀರಿ. ನಿಮ್ಮ ಅರಿವಿನ ಮಾತುಗಳು ನನ್ನ ಕಿವಿಗೆ ಅಮೃತಪ್ರಾಯವಾಗಿದ್ದವು. ಅದರಿಂದಾಗಿ ನನ್ನ ದೇಹವು ಶಾಂತಸ್ಥಿತಿಯಲ್ಲಿದೆ. ಹೀಗೆ ಜ್ಞಾನಿಗಳ ಸಹವಾಸವನ್ನು ಮಾಡಿದವರು ನಿಜಕ್ಕೂ ಧನ್ಯರೇ. ಎಲ್ಲ ಜನರೂ ನಿಮ್ಮ ಪಾದಗಳನ್ನು ಶಿರದಲ್ಲಿ ಧಾರಣೆ ಮಾಡಬೇಕು. ಓ ರಾಜನೇ, ನಾನು ನಿನಗೆ ಯಾವ ರೀತಿ ಸೇವೆ ಸಲ್ಲಿಸಲಿ? ದಯವಿಟ್ಟು ಆಜ್ಞೆ ಮಾಡು.''

ಆಗ ರಾಜನು ಹೇಳಿದನು: ''ಓ ಕರ್ಕಟಿ, ಆಹಾರಕ್ಕಾಗಿ ಇನ್ನು ಮುಂದೆ ಯಾವ ಮಾನವಜೀವಿಯನ್ನೂ ಕೊಲ್ಲಬೇಡ. ಅಲ್ಲದೆ ಯಾವ ಜೀವಿಯನ್ನೂ ಹಿಂಸೆಗೆ ಒಳಪಡಿಸಬೇಡ.''

ಇದಕ್ಕೆ ಕರ್ಕಟಿಯು ತಲೆಬಾಗಿ ನುಡಿದಳು: ''ಓ ಪ್ರಭುವೇ, ನಿನ್ನ ಆಣತಿಯಂತೆಯೇ ಆಗಲಿ. ನಾನು ಸತ್ಯವನ್ನೇ ಹೇಳುತ್ತೇನೆ. ಭವಿಷ್ಯದಲ್ಲಿ ನಾನು ಯಾರನ್ನೂ ಕೊಲ್ಲುವುದಿಲ್ಲ.''

ಆಗ ರಾಜನೆಂದ, ''ಹಾಗಾದರೆ ಹೇಗೆ ತಾನೇ ನೀನು ಜೀವಿಸುವೆ? ನೀನು ಪ್ರಾಣಿಗಳ ಮಾಂಸದ ಮೇಲೆಯೇ ಜೀವಿಸುವವಳಲ್ಲವೆ?''

ಕರ್ಕಟಿ ವಿನಯದಿಂದ ಉತ್ತರಿಸಿದಳು: ''ನಾನು ಮತ್ತೊಮ್ಮೆ ಹಿಮಾಲಯದ ಶಿಖರದಲ್ಲಿ ಏಕಾಂತವಾಸ ಮಾಡುತ್ತೇನೆ. ನಿರ್ವಿಕಲ್ಪ ಸಮಾಧಿಯನ್ನು ಬಹುಕಾಲ ಅಭ್ಯಾಸ ಮಾಡುತ್ತೇನೆ. ಅದರ ಆನಂದಾಮೃತವನ್ನು ಸವಿಯುತ್ತೇನೆ. ನಂತರ ನಾನು ಈ ದೇಹ ವನ್ನು ತ್ಯಾಗ ಮಾಡಿ ವಿದೇಹಮುಕ್ತಿಯನ್ನು ಪಡೆಯುತ್ತೇನೆ. ಓ ರಾಜ, ಇಂದಿನಿಂದ ನನ್ನ ದೇಹವು ಬಿದ್ದುಹೋಗುವವರೆಗೂ ನಾನು ಯಾವ ಜೀವಿಯನ್ನೂ ಕೊಲ್ಲುವುದಿಲ್ಲ ಮಾತ್ರವಲ್ಲ , ಹಿಂಸಿಸುವುದೂ ಇಲ್ಲ. ಈ ವಿಷಯದಲ್ಲಿ ನೀನು ನನ್ನ ಮಾತನ್ನು ಪೂರ್ತಿಯಾಗಿ ನಂಬಬಹುದು.''

ರಾಜನು ಹೇಳಿದನು: ''ಕರ್ಕಟಿ, ದಯವಿಟ್ಟು ನೀನು ನನ್ನ ಅರಮನೆಗೆ ಬಂದು ನನ್ನ ಆತಿಥ್ಯವನ್ನು ಸ್ವೀಕರಿಸು.'' ಅದಕ್ಕೆ ಕರ್ಕಟಿಯು ಒಪ್ಪಿಕೊಂಡಳು. ಅವಳು ಲಕ್ಷ್ಮಿಯಂತೆ ಸುಂದರವಾದ ರೂಪವನ್ನು ಧರಿಸಿದಳು. ರಾಜ ಮತ್ತು ಮಂತ್ರಿಯರೊಡನೆ ಆಕೆ ಅರಮನೆಗೆ ತೆರಳಿದಳು. ಅಲ್ಲಿನ ಆಹಾರವನ್ನು ಸ್ವೀಕರಿಸಿ ತನ್ನ ಹಸಿವೆಯನ್ನು ಇಂಗಿಸಿಕೊಂಡಳು. ನಂತರ ಹಿಮಾಲಯಕ್ಕೆ ತೆರಳಿ, ಅಲ್ಲಿ ಸಮಾಧಿಭಾವದಲ್ಲಿ ನೆಲೆನಿಂತು ತಪಸ್ಸು ಮಾಡಿದಳು. ನಾಲ್ಕು ವರ್ಷಗಳ ಕಾಲ ಅವಳು ಸತತವಾಗಿ ಆ ಸ್ಥಿತಿಯಲ್ಲಿ ಇರುತ್ತಿದ್ದಳು. ಒಮ್ಮೆ ಏಳು ವರ್ಷಗಳ ಕಾಲ ಸಮಾಧಿಯಲ್ಲಿಯೇ ಮುಳುಗಿ ಬಿಟ್ಟಿದ್ದಳು. ಆ ಬಳಿಕವೂ ಮಧ್ಯೆ ಮಧ್ಯೆ ಅರಮನೆಗೆ ಬಂದು ರಾಜ ಮತ್ತು ಮಂತ್ರಿಯರೊಡನೆ ಸತ್ಸಂಗದಲ್ಲಿ ಕಾಲ ಕಳೆಯತೊಡಗಿದಳು. ಮುಂದಿನ ದಿನಗಳಲ್ಲಿ ಕರ್ಕಟಿ ಮತ್ತು ರಾಜ ಇಬ್ಬರೂ ಪರಸ್ಪರ ಸ್ನೇಹ ಭಾವದಿಂದ ನಡೆದುಕೊಂಡರು.

ನೋಡಿದರಾ, ಜಾತಿ ಮತ ಭೇದವಿಲ್ಲದೆ ಒಬ್ಬ ರಾಕ್ಷಸಿ, ಒಬ್ಬ ಬೇಟೆಗಾರ ರಾಜ ಮತ್ತು ಅವನ ಮಂತ್ರಿ ಕೂಡ ಜ್ಞಾನಿಗಳಾಗಲು ಸಾಧ್ಯ ಎಂಬುದನ್ನು ಯೋಗವಾಸಿಷ್ಠವು ತೋರಿಸಿಕೊಡುತ್ತದೆ! ಇದು ನಿಜಕ್ಕೂ ಅದ್ಭುತವಲ್ಲವೆ?! ✷

**ಮನುಷ್ಯರ ಬುದ್ಧಿ ಎಷ್ಟರಮಟ್ಟಿನದು? ಏನು ಕೇಳಬೇಕಾಗಿದೆಯೋ ಅದರ ಬದಲು ಇನ್ನೇನನ್ನೋ ಕೇಳುತ್ತಾನೆ. ಶಿವನ ಮೂರ್ತಿ ಮಾಡಲು ಹೋಗಿ ಮಂಗನ ಮೂರ್ತಿ ಮಾಡಿದಂತೆ. ಭಗವಂತನಲ್ಲಿ ಶರಣಾದರೆ ಒಳ್ಳೆಯದು. ಯಾವಾಗ ಏನು ಅಗತ್ಯವೋ ಅದನ್ನೆಲ್ಲ ಅವನೇ ಕೊಡುತ್ತಾನೆ. ಆದರೂ ಭಕ್ತಿಗಾಗಿ ಮತ್ತು ಮನಸ್ಸಿನಲ್ಲಿ ಆಸೆಗಳಿಲ್ಲದಂತಾಗಲು ಪ್ರಾರ್ಥಿಸಬೇಕು. ಈ ಬಯಕೆಗಳು ಇತರ ಬಯಕೆಗಳ ಸಾಲಿಗೆ ಸೇರುವುದಿಲ್ಲ.**

-ಶ್ರೀಮಾತೆ ಶಾರದಾದೇವಿ